# ಚಾಕೊಲೇಟ್ ಪಿರಮಿಡ್







ಚಾಕೊಲೇಟ್ ಪ್ರಿಯರಿಗೊಂದು ಸಿಹಿ ಸುದ್ದಿ. ಕ್ಯಾಲಿಫೋರ್ನಿಯಾದ ಐರ್ವಿನ್‌ನಲ್ಲಿ ಪ್ರಪಂಚದ ಅತಿ ದೊಡ್ಡ ಚಾಕೊಲೇಟ್ ಕಲಾಕೃತಿಯೊಂದು ತಯಾರಾಗಿದೆ. ಹೊಟ್ಟೆ ತುಂಬಾ ತಿಂದು ಚಾಕೊಲೇಟ್ ದಾಹವನ್ನು ತೀರಿಸಿಕೊಳ್ಳೋಣ ಎಂದು ಸಂತೋಷ ಪಡದಿರಿ, ಇದೇನಿದ್ದರೂ ಕಣ್ತುಂಬಿಕೊಳ್ಳಲು ಮಾತ್ರ.

ಕ್ವಿಜಿನಾ ಚಾಕೊಲೇಟ್ ಮತ್ತು ಪೇಸ್ಟ್ರಿ ಸಂಸ್ಥೆ ತನ್ನ ಮೂವತ್ತು ವರ್ಷದ ಸಂಭ್ರಮಾಚರಣೆಗಾಗಿ ಬೃಹತ್ ಗಾತ್ರದ ಚಾಕೊಲೇಟನ್ನು ಪ್ರದರ್ಶನಕ್ಕಿಟ್ಟಿದೆ. ಇದರ ತೂಕ ಬರೋಬ್ಬರಿ 8,273.3 ಕೆ.ಜಿ! ಒಂದು ಅಡಿ ಹನ್ನೊಂದು ಇಂಚು ಎತ್ತರವಿರುವ ಇದು ಜಗತ್ತಿನ ಅತೀ ದೊಡ್ಡ ಚಾಕೊಲೇಟ್ ಕಲಾಕೃತಿ ಎಂದು ವಿಶ್ವ ದಾಖಲೆ ನಿರ್ಮಿಸಿದೆ. ಕ್ಯಾಲಿಫೋರ್ನಿಯಾದ ಚಾಕೊಲೇಟ್ ಪರಿಣಿತರಿಂದ ಈ ಸುಂದರ ಕಲಾಕೃತಿ ತಯಾರಾಗಿದ್ದು, ಇದರ ಕೆತ್ತನೆಗೆ 400 ಗಂಟೆ ವಿನಿಯೋಗಿಸಿದ್ದಾರೆ.

ಚಾಕೊಲೇಟ್ ತಯಾರಿಸಲು ಬಳಸುವ ಕೋಕೊ ಮರವನ್ನು ಮೊದಲು ಬೆಳೆಸಿದ್ದು, ಮಯಾನ್ ಸಮುದಾಯದವರು. ಅದರ ಬೀಜದ ಉಪಯೋಗವನ್ನು ಅರಿತವರು ಅವರೇ. ಹಾಗಾಗಿ ಮೆಕ್ಸಿಕೋದಲ್ಲಿರುವ ಕುಕುಲ್‌ಕನ್ ಪಿರಮಿಡ್ಡಿನ ಮಾದರಿಯನ್ನು ಚಾಕೊಲೇಟ್‌ನಿಂದ ತಯಾರಿಸಿದ್ದಾರೆ.

ನೀವು ಈ ಚಾಕೊಲೇಟ್ ಕಣ್ತುಂಬಿಕೊಳ್ಳಬೇಕಾದರೆ ಡಿಸೆಂಬರ್ ಒಳಗೆ ಐರ್ವಿನ್‌ಗೆ ಹೋಗಬೇಕು. ಏಕೆಂದರೆ ಡಿಸೆಂಬರ್ 21ರಂದು ಈ ಪಿರಮಿಡ್ಡನ್ನು ಕೆಡಹುತ್ತಾರೆ.

■ ಡಾ. ಅಮಿರುದ್ದೀನ್ ಖಾಜಿ